ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ/02/ಇಸಿಎಸ್(1)/2018

ಕಾರ್ಯದರ್ಶಿಯವರ ಕಛೇರಿ
ತಾಂತ್ರಿಕ ಪರೀಕ್ಷಾ ಮಂಡಳಿ
ಅರಮನೆ ರಸ್ತೆ, ಬೆಂಗಳೂರು-1
ದಿನಾಂಕ: 22-04-2019

**ಜ್ಞಾಪನ**

ವಿಷಯ: 2019 ಏಪ್ರಿಲ್/ಮೇ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಗೆ ಸಂಬಂಧಿಸಿದಂತೆ ಆಂತರಿಕ ಅಂಕಗಳನ್ನು ಪರಿಶೀಲಿಸಲು ಪರಿವೀಕ್ಷಕರನ್ನು ನೇಮಿಸುವ ಕುರಿತು.

ಉಲ್ಲೇಖ:1)ತಾಂತ್ರಿಕ ಪರೀಕ್ಷಾ ಮಂಡಳಿಯ ದಿ:04-02-2013 ರಂದು ನಡೆದ 153ನೇ ಕೇಂದ್ರೀಯ ಸಭೆಯ ನಿರ್ಣಯ153.2.11
2)ಸರ್ಕಾರಿ ಆದೇಶ ಸಂಖ್ಯೆ:ಇಡಿ 57 ಟಿಪಿಇ 2013 ದಿನಾಂಕ:17.4.2015

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2019 ಏಪ್ರಿಲ್/ಮೇ ಸೆಮಿಸ್ಟರ್ ಪರೀಕ್ಷೆಗೆ ಸಂಬಂಧಿಸಿದಂತೆ ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ಆಂತರಿಕ ಅಂಕಗಳನ್ನು ಹಾಗೂ ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಬಾಹ್ಯ ಪಾಲಿಟೆಕ್ನಿಕ್ ಸಂಸ್ಥೆಯಿಂದ ತಮ್ಮ ಪಾಲಿಟೆಕ್ನಿಕ್‌ಗೆ ನಿಯೋಜಿಸಲ್ಪಟ್ಟ ಮುಖ್ಯವೀಕ್ಷಕರು/ಮುಖ್ಯ ಅಧೀಕ್ಷಕರು/ಉಪ ಮುಖ್ಯ ಅಧೀಕ್ಷಕರುಗಳಲ್ಲಿ ಜೇಷ್ಠತೆಯಲ್ಲಿ ಹಿರಿಯರಾದ ಅಧಿಕಾರಿಗಳು ಪರಿಶೀಲಿಸುವರು.

ಆಂತರಿಕ ಅಂಕಗಳ ಪರಿವೀಕ್ಷಕರ ನೇಮಕಾತಿ ಮಾಹಿತಿ BTELinx ವೆಬ್ ಪೋರ್ಟಲ್‌ನಲ್ಲಿ (ಸರ್ಕಾರಿ ಸಂಸ್ಥೆಗಳಗೂ ಸಹಿತ) ಲಭ್ಯವಿರುತ್ತದೆ. ಆಂತರಿಕ ಅಂಕಗಳ ಪರಿವೀಕ್ಷಕರಿಗೆ <u>ದಿನಾಂಕ: 29-04-2019 ರಿಂದ 20-05-2019 ರವರೆಗೆ</u> ಥಿಯರಿ ಪರೀಕ್ಷೆಗಳು ನಡೆಯುವ ಅವಧಿಯಲ್ಲಿ ನಿಮ್ಮ ಸಂಸ್ಥೆಯ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಪ್ರತಿ ವಿಷಯದ ನೀಲಿ ಪುಸ್ತಕ (Blue Book) ಗಳು, ಆಂತರಿಕ ಅಂಕಗಳ ರಿಜಿಸ್ಟರ್ ಮತ್ತು ಚೆಕ್ ಲಿಸ್ಟ್‌ನಲ್ಲಿ ತಿಳಿಸಿರುವಂತೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಸಂಬಂಧಪಟ್ಟ ನಮೂನೆಗಳಲ್ಲಿ ಒದಗಿಸುವುದು ಮತ್ತು ಆಂತರಿಕ ಅಂಕಗಳನ್ನು ಆನ್‌ಲೈನ್‌ನಲ್ಲಿ BTELinx ವೆಬ್ ಪೋರ್ಟಲ್ ಮೂಲಕ ಕಡ್ಡಾಯವಾಗಿ ಪರಿವೀಕ್ಷಕರ ಸಮ್ಮುಖದಲ್ಲಿ ಅಪ್‌ಲೋಡ್ ಮಾಡಲು ಸೂಚಿಸಲಾಗಿದೆ.

ಆನ್ ಲೈನ್‌ನಲ್ಲಿ ಆಂತರಿಕ ಅಂಕಗಳನ್ನು ಪ್ರತಿ ಕೋರ್ಸಿನ ಡಿಕ್ಷನರಿಯಂತೆ ಯಶಸ್ವಿಯಾಗಿ ಅಪ್ ಲೋಡ್ ಮಾಡಿದ ತಕ್ಷಣ BTELinx ವೆಬ್‌ಪೋರ್ಟಲ್‌ನಿಂದ ಒಂದು ಪ್ರಿಂಟ್ ತೆಗೆದು ಆಂತರಿಕ ಅಂಕಗಳ ರಿಜಿಸ್ಟರ್‌ನೊಡನೆ ಮತ್ತೊಮ್ಮೆ ತಾಳೆ ಮಾಡಿ ಪರಿವೀಕ್ಷಕರು ಹಾಗೂ ಪ್ರಾಚಾರ್ಯರು ಪ್ರತಿ ಪುಟದಲ್ಲಿ ಸಹಿ ಮಾಡಿ ವಿದ್ಯಾರ್ಥಿಗಳ ಸೂಚನಾ ಫಲಕದಲ್ಲಿ ಕಡ್ಡಾಯವಾಗಿ ಪ್ರಕಟಿಸುವುದು ಮತ್ತು ಅದರ ಪ್ರತಿ ಹಾಗೂ ಚೆಕ್‌ಲಿಸ್ಟ್ ನಮೂನೆಗಳನ್ನು ಮಂಡಳಿಗೆ ಕಳುಹಿಸಿಕೊಡತಕ್ಕದ್ದು. ಆಂತರಿಕ ಅಂಕಗಳ ಪರಿವೀಕ್ಷಕರು ಚೆಕ್ ಲಿಸ್ಟ್‌ನ ಒಂದು ದೃಢೀಕೃತ ಪ್ರತಿಯನ್ನು ತಮ್ಮಲ್ಲಿ ಇಟ್ಟುಕೊಳ್ಳುವುದು. ಸಂಸ್ಥೆಯ ಮೂಲ ಆಂತರಿಕ ಅಂಕಗಳ ರಿಜಿಸ್ಟರ್‌ನಲ್ಲಿನ ಸಂಬಂಧಪಟ್ಟ ಎಲ್ಲಾ ಪುಟಗಳಲ್ಲಿಯೂ ಸಂಬಂಧಪಟ್ಟ ಉಪನ್ಯಾಸಕರು/ವಿಭಾಗಾಧಿಕಾರಿ/ಪ್ರಾಂಶುಪಾಲರು ದೃಢೀಕರಿಸಿರುವುದನ್ನು ಖಾತರಿಪಡಿಸಿಕೊಂಡು ಪರಿವೀಕ್ಷಕರು ಎಲ್ಲಾ ಪುಟಗಳಲ್ಲಿಯೂ ಪೂರ್ಣ ಸಹಿ ಮಾಡತಕ್ಕದ್ದು ಹಾಗೂ ಕೊನೆಯ ಪುಟದಲ್ಲಿ ಪ್ರಿನ್ಸಿಪಾಲರು ಮತ್ತು ಆಂತರಿಕ ಅಂಕಗಳ ಪರಿವೀಕ್ಷಕರುಗಳು ಕೆಳಕಂಡಂತೆ ದೃಢೀಕರಿಸಲು ಸೂಚಿಸಲಾಗಿದೆ. ಈ ವಿಷಯದಲ್ಲಿ ಸಂಸ್ಥೆಯ ಪ್ರಾಂಶುಪಾಲರು ವೈಯಕ್ತಿಕ ಗಮನ ಹರಿಸುವುದು. ಮುಂದುವರೆದು ಉಲ್ಲೇಖದ ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿಯ ನಿರ್ಣಯದಂತೆ, ವಿದ್ಯಾರ್ಥಿಗಳಿಗೆ ಕಿರುಪರೀಕ್ಷೆ ನಡೆಸಿದ Blue Book ಗಳನ್ನು ಮೂರು ವರ್ಷ ಕಾಲಾವಧಿಯವರೆಗೆ ಸಂಗ್ರಹಿಸಿಟ್ಟು ನಂತರ ನಿಯಮಾನುಸಾರ ವಿಲೇ ಮಾಡತಕ್ಕದ್ದು ಮತ್ತು ಆಂತರಿಕ ಅಂಕಗಳ ವಹಿಯನ್ನು (I.A Marks Register) ಖಾಯಂ ದಾಖಲೆಯಾಗಿ ಸಂಗ್ರಹಿಸಿಡತಕ್ಕದ್ದೆಂದು ತಿಳಿಸಲಾಗಿದೆ.

**<u>ದೃಢೀಕರಣ:</u>** "ಆಂತರಿಕ ಅಂಕಗಳ ವಹಿಯ ಪ್ರತಿ ಪುಟದಲ್ಲಿಯೂ ಸಂಬಂಧಪಟ್ಟ ಉಪನ್ಯಾಸಕರು, ವಿಭಾಗಾಧಿಕಾರಿಗಳು ಮತ್ತು ಪ್ರಿನ್ಸಿಪಾಲರು ಸಹಿ ಮಾಡಿ ದೃಢೀಕರಿಸಿರುತ್ತಾರೆ. ತಿದ್ದುಪಡಿಗಳನ್ನು ಕಿರುಸಹಿಯಿಂದ ದೃಢೀಕರಿಸಿರುತ್ತಾರೆ. ಆಂತರಿಕಅಂಕಗಳನ್ನು ಬ್ಲೂ ಬುಕ್ ಮತ್ತು ಕ್ರೋಢೀಕೃತ ಹಾಜರಾತಿ ವಹಿಯೊಂದಿಗೆ ತಾಳೆಮಾಡಿ ಪರಿಶೀಲಿಸಲಾಗಿದೆ. ಮುಂದಿನ ಆಗುಹೋಗುಗಳಿಗೆ, ಆಂತರಿಕ ಅಂಕಗಳಿಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿದ ನಾವೇ ಸಂಪೂರ್ಣ ಹೊಣೆಗಾರರಾಗಿರುತ್ತೇವೆ".

ಪ್ರಿನ್ಸಿಪಾಲರ ಸಹಿ — ಪರಿವೀಕ್ಷಕರ ಸಹಿ ಮತ್ತು ವಿಳಾಸ

ಆಂತರಿಕ ಅಂಕಗಳನ್ನು ನಿಗದಿತ ಸಮಯದಲ್ಲಿ ಪರಿವೀಕ್ಷಕರ ಸಮ್ಮುಖದಲ್ಲಿ ಆನ್ ಲೈನ್ (BTELinx) ಮೂಲಕ ಅಪ್‌ಲೋಡ್ ಮಾಡದೆ ಫಲಿತಾಂಶ ವಿಳಂಬವಾದರೆ ಹಾಗೂ ಯಾವುದೇ ಲೋಪದೋಷಗಳಿಂದ/ಆಂತರಿಕ ಅಂಕಗಳ ವ್ಯತ್ಯಾಸದಿಂದ ವಿದ್ಯಾರ್ಥಿಗಳಿಗೆ ಫಲಿತಾಂಶದಲ್ಲಿ ತೊಂದರೆಗಳಾದಲ್ಲಿ ಸಂಬಂಧಿಸಿದ ಪ್ರಿನ್ಸಿಪಾಲರನ್ನೇ ನೇರ ಹೊಣೆಗಾರರನ್ನಾಗಿಸಿ ಉಲ್ಲೇಖ (2) ರ ಸರ್ಕಾರಿ ಆದೇಶದ ಪ್ರಕಾರ ಕ್ರಮಕೈಗೊಳ್ಳಲಾಗುವುದು.

ಕಾರ್ಯದರ್ಶಿ

ಇವರಿಗೆ,

1..ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪ್ರಾಂಶುಪಾಲರುಗಳಿಗೆ.-ಅಗತ್ಯ ಕ್ರಮಕ್ಕಾಗಿ

2.ಆಂತರಿಕ ಅಂಕಗಳ ಪರಿವೀಕ್ಷಕರುಗಳಿಗೆ- ಪರೀಕ್ಷಾ ಕೇಂದ್ರಗಳ ಪ್ರಿನ್ಸಿಪಾಲರುಗಳ ಮುಖಾಂತರ

ಪ್ರತಿ: 1. ಕಂಪ್ಯೂಟರ್ ವಿಭಾಗ – ಬಿಟಿಇ ಲಿಂಕ್ಸ್ ವೆಬ್‌ಪೋರ್ಟಲ್‌ನಲ್ಲಿ ಪ್ರಕಟಿಸಲು 2. ಇ-ಗವರ್ನೆನ್ಸ್ ವಿಭಾಗ –ವೆಬ್‌ಸೈಟ್‌ನಲ್ಲಿ ಪ್ರಕಟಿಸಲು 3. ಕಾರ್ಯದರ್ಶಿಯವರ ಆಪ್ತಶಾಖೆ 4. ಪರೀಕ್ಷಾ ವಿಭಾಗದ ಅಧಿಕಾರಿಗಳು/ ಸಿಬ್ಬಂದಿಯವರಿಗೆ 5. ಇಎಹಿ ವಿಭಾಗ

**ಚೆಕ್‌ಲಿಸ್ಟ್ ನಮೂನೆ**
**(ಭರ್ತಿ ಮಾಡಿದ ನಂತರ ಕಾರ್ಯದರ್ಶಿಯವರಿಗೆ ರವಾನಿಸುವುದು)**

| |
|---|
| ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿನ ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು (IA Marks) ಪರಿಶೀಲಿಸಲು ನಿಯೋಜಿಸಲ್ಪಟ್ಟ ಅಧಿಕಾರಿಗಳು ಗಮನಿಸಬೇಕಾದ ಅಂಶಗಳು(ಚೆಕ್‌ಲಿಸ್ಟ್) |

| | ಹೌದು | ಇಲ್ಲ |
|---|---|---|
| 1. ತಾಂತ್ರಿಕ ಪರೀಕ್ಷಾ ಮಂಡಳಿಯ ಆದೇಶದಂತೆ ಈ ಕೆಳಕಂಡಂತೆ ಕಿರುಪರೀಕ್ಷೆಗಳನ್ನು ನಡೆಸಲಾಗಿದೆಯೇ? | | |
| (ಅ) ಮೊದಲನೆಯ ಕಿರುಪರೀಕ್ಷೆ ಸೆಮಿಸ್ಟರ್ ಪ್ರಾರಂಭವಾಗಿ 6 ವಾರ ಮುಗಿಯುತ್ತಿದ್ದಂತೆ ನಡೆದಿರುವುದೇ? | ☐ | ☐ |
| (ಆ) ಎರಡನೇ ಕಿರುಪರೀಕ್ಷೆ ಸೆಮಿಸ್ಟರ್ ಪ್ರಾರಂಭವಾಗಿ 10 ವಾರ ಮುಗಿಯುತ್ತಿದ್ದಂತೆ ನಡೆಸಲಾಗಿದೆಯೇ? | ☐ | ☐ |
| (ಇ) ಮೂರನೇ ಕಿರುಪರೀಕ್ಷೆ ಸೆಮಿಸ್ಟರ್ ಪ್ರಾರಂಭವಾಗಿ 14 ವಾರ ಮುಗಿಯುತ್ತಿದ್ದಂತೆ ನಡೆಸಲಾಗಿದೆಯೇ? | ☐ | ☐ |
| 2. ಎಲ್ಲಾ ಕಿರುಪರೀಕ್ಷೆಗಳ ವೇಳಾ ಪಟ್ಟಿಗಳನ್ನು ವಿದ್ಯಾರ್ಥಿಗಳ ಗಮನಕ್ಕೆ ತರಲಾಗಿದೆಯೇ? | ☐ | ☐ |
| 3. ಸೂಚನಾ ಫಲಕದಲ್ಲಿ ಕಿರುಪರೀಕ್ಷೆಗಳ ವೇಳಾ ಪಟ್ಟಿಗಳನ್ನು ಪ್ರಕಟಿಸಲಾಗಿದೆಯೇ? | ☐ | ☐ |
| 4. C-15 ಪಠ್ಯಕ್ರಮಗಳಲ್ಲಿ ನಿಗಧಿಪಡಿಸಿದಂತೆ ಪ್ರತಿ ಕಿರುಪರೀಕ್ಷೆ ನಡೆಸುವಾಗ ಕ್ರಮವಾಗಿ ಅದರಲ್ಲಿ ನಿಗಧಿಪಡಿಸಿರುವಂತೆ ಪಾಠ ಪ್ರವಚನಗಳನ್ನು ಮುಗಿಸಿರುವರೆ? ಮತ್ತು C-15 ಪಠ್ಯಕ್ರಮದ ಪಠ್ಯವಿಷಯಗಳಲ್ಲಿ ಪ್ರತಿ ಕಿರು ಪರೀಕ್ಷೆ ನಡೆಸಿದ ತರುವಾಯ ನಿಗದಿಪಡಿಸಲಾದ CO's attainments ಸಾಧಿಸಲಾಗಿದೆಯೇ? | ☐ | ☐ |
| 5. ವಿದ್ಯಾರ್ಥಿಗಳು ಕಿರುಪರೀಕ್ಷೆ ಬರೆಯಲು ಬ್ಲೂ ಬುಕ್ ಇಟ್ಟಿರುವರೆ? | ☐ | ☐ |
| 6. ವಿದ್ಯಾರ್ಥಿಗಳ ಹಾಜರಾತಿ ಪುಸ್ತಕ ಹಾಗೂ ಕ್ರೋಡೀಕೃತ ಹಾಜರಾತಿ ಪುಸ್ತಕ ಪ್ರತಿ ವಿಭಾಗದಲ್ಲಿ ಇರುವುದೇ? | ☐ | ☐ |
| 7. C-15 ಪಠ್ಯಕ್ರಮದ ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು ಸಂಬಂಧಪಟ್ಟ ಕ್ರೋಡೀಕೃತ ವಹಿಗಳಲ್ಲಿ (Consolidated IA Register) ಭರ್ತಿ ಮಾಡಿ ಎಲ್ಲಾ ಪುಟಗಳಲ್ಲಿ ಸಂಬಂಧಪಟ್ಟ ಉಪನ್ಯಾಸಕರು,ವಿಭಾಗಾಧಿಕಾರಿಗಳು ಮತ್ತು ಪ್ರಾಂಶುಪಾಲರು ಸಹಿ ಮಾಡಿರುವರೇ? | ☐ | ☐ |
| 8. ಪ್ರತಿ ವಿದ್ಯಾರ್ಥಿಯ ಹಾಜರಾತಿಯನ್ನು ಹಾಜರಾತಿ ಪುಸ್ತಕದಲ್ಲಿ ಭರ್ತಿ ಮಾಡಿರುವರೆ? | ☐ | ☐ |
| 9. ಪ್ರತಿ ವಿಷಯಗಳಲ್ಲಿ ಕ್ರೋಡೀಕೃತ ಹಾಜರಾತಿಯನ್ನು ಪ್ರತಿ ತಿಂಗಳ ಅಂತ್ಯದಲ್ಲಿ ಪ್ರಕಟಿಸಲಾಗಿದೆಯೇ? ಮತ್ತು ಹಾಜರಾತಿ ಕೊರತೆ ಇರುವ ವಿದ್ಯಾರ್ಥಿಗಳಿಗೆ & ಪೋಷಕರಿಗೆ ಮಾಹಿತಿ ನೀಡಲಾಗಿದೆಯೇ? | ☐ | ☐ |
| 10. ಅಂತಿಮವಾಗಿ C-15 ಪಠ್ಯಕ್ರಮದ ವಿದ್ಯಾರ್ಥಿಗಳಿಗೆ ಥಿಯರಿ ವಿಷಯಗಳು/ ಜೆ.ಓ.ಸಿ ಅಭ್ಯರ್ಥಿಗಳು ಮತ್ತು ಲ್ಯಾಟರಲ್ ಎಂಟ್ರಿ ಮೂಲಕ 3ನೇ ಸೆಮಿಸ್ಟರ್ ಪ್ರವೇಶ ಪಡೆದಿರುವ ಐ.ಟಿ.ಐ ವಿದ್ಯಾರ್ಥಿಗಳು ತೆಗೆದುಕೊಳ್ಳುವ C-15 ಪಠ್ಯಕ್ರಮದ ಥಿಯರಿ ವಿಷಯಗಳಿಗೆ (Bridge Subjects) ಕೂಡ ಅನ್ವಯವಾಗುವಂತೆ ಆಂತರಿಕ ಅಂಕಗಳನ್ನು ನೀಡುವಾಗ ಮೂರು ಕಿರು ಪರೀಕ್ಷೆಗಳ ಅಂಕಗಳನ್ನು ಪರಿಗಣಿಸಲಾಗಿದೆಯೇ? | ☐ | ☐ |
| 11. ಅಂತಿಮವಾಗಿ C-15 ಪಠ್ಯಕ್ರಮದ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ವಿಷಯಗಳ ಆಂತರಿಕ ಅಂಕಗಳನ್ನು ನೀಡುವಾಗ ಪ್ರತಿ 10 ಅಂಕಗಳ ಎರಡೂ ಕಿರು ಪರೀಕ್ಷೆಗಳ ಅಂಕಗಳನ್ನು ಪರಿಗಣಿಸಲಾಗಿದೆಯೇ? | ☐ | ☐ |
| 12. C-15 ಪಠ್ಯಕ್ರಮದ ಆಂತರಿಕ ಪರೀಕ್ಷೆಯ ಪ್ರಶ್ನೆಪತ್ರಿಕೆಗಳನ್ನು ತಯಾರಿಸಲು ನಿಗದಿಪಡಿಸಲಾದ ವಿವಿಧ "cognitive level" -ಗಳನುಸಾರ "Blooms Action Verbs" ಗಳನ್ನು ಬಳಸಲಾಗಿದೆಯೇ? | ☐ | ☐ |
| 13. C-15 ಪಠ್ಯಕ್ರಮದ ಪ್ರತಿ ವಿಷಯಗಳಿಗೆ (ಥಿಯರಿ ಮತ್ತು ಪ್ರಾಯೋಗಿಕ) "Course Plan" ಬರೆಯಲಾಗಿದೆಯೇ? ಹಾಗೂ ವಿಭಾಗಾಧಿಕಾರಿಗಳಿಂದ ದೃಢೀಕರಿಸಲ್ಪಟ್ಟಿದೆಯೇ? | ☐ | ☐ |
| 14. C-15 ಪಠ್ಯಕ್ರಮದ ವಿಷಯಗಳಿಗೆ ಆಂತರಿಕ ಅಂಕಗಳಲ್ಲಿ 5 ಅಂಕಗಳನ್ನು (ಥಿಯರಿ ಮತ್ತು ಪ್ರಾಯೋಗಿಕ) ವಿದ್ಯಾರ್ಥಿ ಚಟುವಟಿಕೆಗಳಿಗೆ (Student activity) ನೀಡಲಾಗಿದೆಯೇ? ಹಾಗೆ ನೀಡುವಾಗ Performance indicator (Rubrics) ಮುಖಾಂತರ ಮಾಡಲಾಗಿದೆಯೇ? ಅದಕ್ಕೆ evidence ಒದಗಿಸಲಾಗಿದೆಯೇ? | ☐ | ☐ |
| 15. ವಿದ್ಯಾರ್ಥಿಗಳ ಪ್ರಾಯೋಗಿಕ ವಿಷಯಗಳ ರೆಕಾರ್ಡ್‌ಗಳ/ಇತರೆ ಶೈಕ್ಷಣಿಕ ದಾಖಲೆಗಳ ಮೌಲ್ಯಮಾಪನವಾಗಿದೆಯೇ? | ☐ | ☐ |

16. ಸರ್ಕಾರಿ ಆದೇಶಗಳಂತೆ ನಿಯಮಾನುಸಾರ ಅವುಗಳ ಮೌಲ್ಯಮಾಪನವಾಗಿದೆಯೇ?

17. Midterm Feedback & Course end Survey Feedback ಗಳನ್ನು ಪ್ರತಿ ಥಿಯರಿ ಮತ್ತು ಪ್ರಾಯೋಗಿಕ ವಿಷಯಗಳಲ್ಲಿ C-15 ಪಠ್ಯಕ್ರಮದ ವಿದ್ಯಾರ್ಥಿಗಳಿಂದ ಪಡೆಯಲಾಗಿದೆಯೇ? ಮತ್ತು ಪಡೆದ Feedback ಗಳ ವಿಶ್ಲೇಷಣೆ(Analysis) ಮಾಡಲಾಗಿದೆಯೇ?

18. ಸಂಸ್ಥೆಯಲ್ಲಿ ವಿದ್ಯಾರ್ಥಿಗಳ ಹಾಜರಾತಿ ಪುಸ್ತಕ(ಕ್ರೋಢೀಕೃತ ವಹಿ ಸಹಿತ) ಮತ್ತು ಅಂತರಿಕ ಅಂಕಗಳ ರಿಜಿಸ್ಟರ್‌ಗಳಲ್ಲಿ ವಿದ್ಯಾರ್ಥಿಗಳ ಸಹಿ ಪಡೆಯಲಾಗಿದೆಯೇ?

19. ಎಲ್ಲಾ ಕೋರ್ಸುಗಳ ಆಂತರಿಕ ಅಂಕಗಳನ್ನು BTELinx ವೆಬ್‌ಪೋರ್ಟಲ್ ಮೂಲಕ ಆನ್ ಲೈನ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆಯೇ?

20. ಪರೀಕ್ಷಾ ಶುಲ್ಕ ಪಾವತಿಸದೇ ಇರುವ ವಿದ್ಯಾರ್ಥಿಗಳ ಹೆಸರುಗಳನ್ನು ಆಯಾ ಕ್ಯಾಂಡಿಡೇಟ್ ಲಿಸ್ಟ್‌ನಿಂದ ತೆಗೆದು ಹಾಕಲಾಗಿದೆಯೇ?

21. ಸರ್ಕಾರಿ ಖಜಾನೆಗೆ ಪಾವತಿಸಲಾಗಿರುವ ಒಟ್ಟು ಪರೀಕ್ಷಾ ಶುಲ್ಕದ ಮೊತ್ತವು ಸಂಸ್ಥೆಯಲ್ಲಿನ ಕ್ಯಾಂಡಿಡೇಟ್ ಲಿಸ್ಟ್‌ನ ಲೆಡ್ಜರ್‌ನಲ್ಲಿ ನಮೂದಿಸಿರುವಂತೆ ವಿದ್ಯಾರ್ಥಿಗಳು ನಿಯಮಾನುಸಾರ ಪಾವತಿಸಬೇಕಾದ ಮೊತ್ತಕ್ಕೆ ತಾಳೆಯಾಗುತ್ತದೆಯೇ?

22. ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಿದ ತಕ್ಷಣ BTELinx ವೆಬ್ ಪೋರ್ಟಲ್‌ನಿಂದ ಒಂದು ಪ್ರಿಂಟ್ ತೆಗೆದು ಸಂಸ್ಥೆಯಲ್ಲಿ ಆಂತರಿಕ ಅಂಕಗಳ ವಹಿಯೊಡನೆ ತಾಳೆ ಮಾಡಿ ನಂತರ ಪರಿವೀಕ್ಷಕರು ಮತ್ತು ಪ್ರಾಚಾರ್ಯರು ಸಹಿ ಮಾಡಿ ವಿದ್ಯಾರ್ಥಿಗಳ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆಯೇ?

23. ಪರಿವೀಕ್ಷಕರು C-15 ಪಠ್ಯಕ್ರಮದ ವಿದ್ಯಾರ್ಥಿಗಳ ಆಂತರಿಕ ಅಂಕಗಳ ರಿಜಿಸ್ಟರ್‌ಗಳಲ್ಲಿ ಸಂಬಂಧಪಟ್ಟ ಎಲ್ಲಾ ಪುಟಗಳಲ್ಲಿ ಪೂರ್ಣ ಸಹಿ ಮಾಡಿ ಕೊನೆಯ ಪುಟದಲ್ಲಿ ತಿಳಿಸಿರುವಂತೆ ಧೃಢೀಕರಿಸಿ ಪೂರ್ಣ ವಿಳಾಸ ನಮೂದಿಸಿರುವರೇ?

24. ಪರಿವೀಕ್ಷಕರ ಷರಾ (ಏನಾದರೂ ಇದ್ದಲ್ಲಿ)

ಪ್ರಾಂಶುಪಾಲರ ಸಹಿ

ಪರಿವೀಕ್ಷಕರ ಸಹಿ